VI ಗುಲ್ಬರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ನೌಕರರ ಮುಷ್ಕರದ ಬಗ್ಗೆ ಮಾನ್ಯ ಮಂತ್ರಿಯವರ ಹೇಳಿಕೆ

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಕಾಂತ ಅವರ ಸೂಚನೆಯ ಬಗ್ಗೆ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಗುಲ್ಬರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಆಡಳಿತ ಮಂಡಳಿಯು ೧೮ನೇ ಜೂನ್ ೧೯೮೦ ರಂದು ತನ್ನ ನೌಕರ ವರ್ಗದೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡಿದೆ. ಈ ಒಪ್ಪಂದ ೧ನೇ ಜನವರಿ ೧೯೭೯ರಿಂದ ಜಾರಿಗೆ ಬರುವಂತೆ ಮಾಡಿಕೊಂಡಿದ್ದಾರೆ. ಇದರಲ್ಲಿ ನೌಕರರ ವರ್ಗದ ವೇತನ ಶ್ರೇಣಿಯನ್ನು ಪುನರ್‌ಬಾಡಿಗೆ ಭತ್ಯೆ ಬೋನಸ್ ರಜಾ ಸೌಲಭ್ಯ ಮುಂತಾದ ಸೌಲಭ್ಯಗಳನ್ನು ಯಾವ ರೀತಿಯಲ್ಲಿ ಕೊಡಬೇಕೆಂದು ನಿಗದಿ ಮಾಡಿರುತ್ತಾರೆ. ಈ ಒಪ್ಪಂದದ ಪ್ರಕಾರ ನೌಕರರಿಗೆ ೧ನೇ ಜನವರಿ ೧೯೭೯ರಿಂದ ೩೦ನೇ ನವೆಂಬರ್ ೧೯೮೦ರವರೆಗೆ ಸೌಲಭ್ಯಗಳನ್ನು ಕೊಟ್ಟಿರುತ್ತಾರೆ. ಆದರೆ ನಿಬಂಧಕರು ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೂ ದಿನಾಂಕ ೨೫ನೇ ನವೆಂಬರ್ ೧೯೮೦ರ ಪತ್ರದಲ್ಲಿ ಪುನರ್ ಬಾಡಿಗೆ ಭತ್ಯೆ ಪ್ರಯಾಣ ಭತ್ಯೆ ಇತ್ಯಾದಿಗಳನ್ನು ನಿಗದಿಪಡಿಸುವ ಬಗ್ಗೆ ಪರಿಶೀಲಿಸುತ್ತಿರುವುದಾಗಿಯೂ ಆದ್ದರಿಂದ ಪುನರ್ ಬಾಡಿಗೆ ಭತ್ಯೆ ಮುಂತಾದ ಸೌಲಭ್ಯಗಳನ್ನು ಜಾರಿಗೊಳಿಸಬಾರದಾಗಿಯೂ ತಿಳಿಸಿರುತ್ತಾರೆ. ಅದರಂತೆ ಈ ಬ್ಯಾಂಕಿನಲ್ಲಿ ೧ನೇ ಡಿಸೆಂಬರ್ ೧೯೮೦ರಿಂದ ಈ ಸೌಲಭ್ಯಗಳನ್ನು ಭಾಗಶಃ ನಿಲ್ಲಿಸಿರುತ್ತಾರೆ. ಗುಲ್ಬರ್ಗ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನೌಕರರ ವೇತನ ಶ್ರೇಣಿಯನ್ನು ಸಹಕಾರ ಸಂಘಗಳ ನಿಯಮ ೧೯೬೦ ೧೭ (೧) ರ ಪ್ರಕಾರ ನಿಗದಿಪಡಿಸಲಾಗುತ್ತಿದೆ. ಸದರಿ ಬ್ಯಾಂಕಿನ ನೌಕರರ ವೇತನ ಶ್ರೇಣಿಯನ್ನು ದಿನಾಂಕ ೧೭ನೇ ಜೂನ್ ೧೯೮೦ರಲ್ಲಿ ನಿಬಂಧಕರು ಒಪ್ಪಿಗೆ ನೀಡಿರುತ್ತಾರೆ. ಅದರಂತೆ ವೇತನ ಹಾಗೂ ತುಟ್ಟಿ ಭತ್ಯೆಗಳನ್ನು ಕೊಡಲಾಗುತ್ತಿದೆ. ಸಿಬ್ಬಂದಿಗೆ ನೀಡಲಾಗುವ ವೇತನ ತುಟ್ಟಿಭತ್ಯೆ ಮತ್ತು ಇತರ ಸೌಲಭ್ಯಗಳನ್ನು ನಿಗದಿ ಮಾಡುವ ಬಗ್ಗೆ ಸೂಕ್ತವಾದ ಮಾರ್ಗಸೂಚಿಗಳು ಇಲ್ಲದಿದ್ದರಿಂದ ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತವಾದ ಮಾರ್ಗದರ್ಶನಗಳನ್ನು ನೀಡಲು ನಿಬಂಧಕರು ಒಂದು ಸಮಿತಿಯನ್ನು ನೇಮಿಸಿದ್ದರು. ಸದರಿ ಸಮಿತಿಯು ರಾಜ್ಯದಲ್ಲಿನ ಎಲ್ಲಾ ಬ್ಯಾಂಕುಗಳನ್ನು ಅಭ್ಯಸಿಸಿ ಅವುಗಳ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ವರ್ಗೀಕರಿಸಿ ಆ ವರ್ಗೀಕರಣಕ್ಕೆ ತಕ್ಕಂತೆ ವೇತನ ಸೌಲಭ್ಯಗಳನ್ನು ಮತ್ತು ಇತರ ಸೌಲಭ್ಯಗಳನ್ನು ಶಿಫಾರಸ್ ಮಾಡಿದೆ. ಆ ಶಿಫಾರಸ್‌ಗಳನ್ನು ಎಲ್ಲಾ ಜಿಲ್ಲಾ ಬ್ಯಾಂಕುಗಳಿಗೆ ರವಾನಿಸಿ ಆ ಸಂಬಂಧದಲ್ಲಿ ಸೂಕ್ತವಾದ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಿ ನಿಬಂಧಕರ ಕಛೇರಿಗೆ ಕಳಿಸಲು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಬ್ಯಾಂಕು ಗುಲ್ಬರ್ಗ ವಿಭಾಗದ ಸಂಯುಕ್ತ ನಿಬಂಧಕರಿಗೆ ನೇರವಾಗಿ ೨೪ನೇ ಡಿಸೆಂಬರ್ ೧೯೮೩ರಲ್ಲಿ ಪ್ರಸ್ತಾವನೆಯನ್ನು ಕಳುಹಿಸಿದೆ. ಆದ್ದರಿಂದ ಸಂಯುಕ್ತ ನಿಬಂಧಕರು ೧೨ನೇ ಜನವರಿ ೧೯೮೪ರಲ್ಲಿ ಪತ್ರದ ಮೂಲಕ ಸದರಿ ಬ್ಯಾಂಕ್ ಪ್ರಸ್ತಾವನೆಯನ್ನು ಕ್ರಮವಾದ ಮಾರ್ಗದಲ್ಲಿ ಸಲ್ಲಿಸಲು ವಿನಂತಿಸಿ ಹಿಂದಿರಿಗಿಸಿದ್ದಾರೆ. ಹಣ ದುರುಪಯೋಗದ ಪ್ರಕರಣಗಳಲ್ಲಿ ಬ್ಯಾಂಕ್ ಐದು ಜನ ನೌಕರರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದ್ದು ಈ ಮೊಕದ್ದಮೆಗಳು ಆರು ತಿಂಗಳಿಗೂ ಮಿಗಿ ಮುಂದುವರೆದಿರುವುದರಿಂದ ಆಡಳಿತ ಮಂಡಳಿಯು ಬ್ಯಾಂಕಿನ ಸೇವಾ ನಿಯಮಗಳಿಗೆ ಅನುಸಾರವಾಗಿ ಈ ಐದು ಜನರನ್ನು ಸೇವೆಯಿಂದ ಪಜಾ ಮಾಡಿದೆ. ಈ ಕ್ರಮವನ್ನು ಪ್ರಶ್ನಿಸಿ ಒಬ್ಬ ನೌಕರನು ಹೈಕೋರ್ಟಿಗೆ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಹೈಕೋರ್ಟಿನ ತೀರ್ಪಿನ ನಂತರ ಬ್ಯಾಂಕ್ ಈ ಬಗ್ಗೆ ಪರಿಶೀಲಿಸಬಹುದು.

ಬ್ಯಾಂಕಿನ ಹಿತದೃಷ್ಟಿಯಿಂದ ನೌಕರರು ಮುಷ್ಕರ ಮಾಡುವುದು ಕ್ಷೇಮವಲ್ಲ. ಇದರಿಂದ ಬ್ಯಾಂಕಿನ ಬಗ್ಗೆ ಸಾರ್ವಜನಿಕವಾಗಿ ಕೆಟ್ಟ ಅಭಿಪ್ರಾಯ ಮೂಡಬಹುದಾಗಿದ್ದು ಬ್ಯಾಂಕಿಗೆ ಬರಬಹುದಾದ ಅನೇಕ ಸೌಲಭ್ಯಗಳು ತಪ್ಪಿ ಹೋಗುವ ಸಂಭವವಿದೆ

ಮಾನ್ಯ ಅಧ್ಯಕ್ಷರೆ, ಈ ಸಂಬಂಧವಾಗಿ ೫೫ ಜನರನ್ನು ನಾವು ಡಿಸ್‌ಮಿಸ್ ಸಹ ಮಾಡಿದ್ದೇವೆ. ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅವರಲ್ಲಿ ಒಬ್ಬರಾದಂಥ ಶ್ರೀಮಾನ್ ಬಸವರಾಜ್ ಎನ್ನುವವರು ಸುಮಾರು ೫೬,೧೦೦ ರೂಪಾಯಿಗಳ ಅವ್ಯವಹಾರ ಮಾಡಿದ್ದಾರೆ. ಅದೇ ರೀತಿಯಾಗಿ ಶ್ರೀ ಯಮನಪ್ಪ ಎಂಬುವವರು ಸುಮಾರು ೨೭ ಸಾವಿರ ರೂಪಾಯಿಗಳ ಅವ್ಯವಹಾರ ಮಾಡಿದ್ದಾರೆ. ಮತ್ತೆ ಬಸವರಾಜ್, ಸೂಪರ್‌ವೈಜರ್, ಇವರು ಸುಮಾರು ೯,೬೯೪ ರೂಪಾಯಿಗಳ ಅವ್ಯವಹಾರ ಮಾಡಿದ್ದಾರೆ. ಶ್ರೀ ಯಾಕುಬ್ ಆಲಿ ಎಂಬುವವರು ೨,೦೭೫ ರೂಪಾಯಿಗಳ ಅವ್ಯವಹಾರವನ್ನು ಮಾಡಿದ್ದಾರೆ. ಶ್ರೀ ವಿ. ಸಿ. ಪಾಟೀಲ್

ಎಂಬುವವರು ೨,೦೧೨ ರೂಪಾಯಿಗಳ ಅವ್ಯವಹಾರವನ್ನು ಮಾಡಿದ್ದಾರೆ. ಈ ರೀತಿ ಬ್ಯಾಂಕಿನಲ್ಲಿ ಅವ್ಯವಹಾರ ಮಾಡಿದ ಕಾರಣದಿಂದಾಗಿ ಅವರನ್ನು ಸೇವೆಯಿಂದ ಡಿಸ್‌ಮಿಸ್ ಮಾಡಲಾಗಿದೆ. ಮತ್ತೆ ಅವರನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಿದರೆ ಹೇಗೆ? ಆದ್ದರಿಂದ ಅಂಥವರಿಗೆ ರಕ್ಷಣೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ ಎನ್ನುವ ಮಾತನ್ನು ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ನಾನು ಅವರನ್ನು ಯಾವಾಗಲೂ ಕೂಡ ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಹೇಳಲಿಲ್ಲ. ಆದರೆ ಕಾನೂನು ಪ್ರಕಾರ ಅವರನ್ನು ಡಿಸ್‌ಮಿಸ್ ಮಾಡಿಲ್ಲ. ಬರೀ ಟರ್ಮಿನೇಷನ್ ಎಂದು ಮಾತ್ರ ಮಾಡಿದ್ದಾರೆ. ಇದು ಯಾವ ಕಾನೂನಿನಲ್ಲಿ ಇದೆ? ಇದು ಯಾವ ಸಂವಿಧಾನದಲ್ಲಿ ಇದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಿದರೆ ಒಳ್ಳೆಯದು.

ಶ್ರೀ ಆರ್. ಜಾಲಪ್ಪ.—ಸ್ವಾಮಿ ನಾವು ಬ್ಯಾಂಕಿನ ಬೈಲಾ ಪ್ರಕಾರ ಆ ರೀತಿಯ ಕ್ರಮವನ್ನು ಅವರ ಮೇಲೆ ತೆಗೆದುಕೊಂಡಿದ್ದೇವೆ.

ಶ್ರೀ ಎಸ್. ಕೆ. ಕಾಂತ.—ಸ್ವಾಮಿ, ಮಾನ್ಯ ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು.— ತಾವು ಮಂತ್ರಿಗಳ ಜೊತೆಯಲ್ಲಿ ಮಾತನಾಡಿ.

ಶ್ರೀ ಆರ್. ಎಲ್. ಜಾಲಪ್ಪ.— ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಕ್ಲಾಸ್–೩ ಮತ್ತು ಕ್ಲಾಸ್–೪ಗೆ ಬರುತ್ತದೆ. ಕ್ಲಾಸ್–೧ ಮತ್ತು ಕ್ಲಾಸ್–೨ಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಪ್ರಿವಿಲೇಜ್‌ಮೋಷನ್ ಅನ್ನು ಇಪತ್ತು ತೆಗೆದುಕೊಳ್ಳೋಣವೆಂದು ಹೇಳಿದ್ದೀರಿ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಮೈಸೂರಿನ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಕ್ಕೆ ತಯಾರಾಗಿದ್ದಾರೆ. ತಾವು ಕೂಡ ಇವತ್ತು ಅದರ ಬಗ್ಗೆ ಉತ್ತರ ಕೊಡಲಾಗುತ್ತದೆಂದು ಹೇಳಿದ್ದೀರಿ.

ಅಧ್ಯಕ್ಷರು.— ತಮಗೆ ಅವಕಾಶವಿದೆ ಆಗ ಹೇಳಿ.

VII) ಮುಖ್ಯಮಂತ್ರಿಯವರು ಮೇಲ್ಮನೆಯಲ್ಲಿ ಮಾಡಿದ ಹೇಳಿಕೆಯ ಕುರಿತಂ ಹಕ್ಕುಬಾಧ್ಯತಾ ನಿರ್ಣಯ ಮಂಡಿಸಲು ಅನುಮತಿ ಕೊಡುವ ಬಗ್ಗೆ

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ನಾನು ಹಕ್ಕುಬಾಧ್ಯತಾ ನಿರ್ಣಯವನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ವಿಚಾರ ಇಷ್ಟೆ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಸರ್ಕಾರದ ಪರವಾಗಿ ಮಾತನಾಡತಕ್ಕ ಸಂದರ್ಭದಲ್ಲಿ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದು ಈ ಸದನದ ಸದಸ್ಯರಾಗಿರತಕ್ಕ ಮಾನ್ಯ ಉಗ್ರನರಸಿಂಹಪ್ಪನವರ ವಿಚಾರದ ಮೇಲೆ ಚರ್ಚೆಯಾಗುತ್ತಿದ್ದಾಗ ಅವರು ಹೇಳಿರತಕ್ಕ ಮಾತು. ನಾನು ಎಲ್ಲಾ ವಿವರಗಳಿಗೆ ಹೋಗುವುದಿಲ್ಲ, ನಿಯಮಗಳ ಪ್ರತಿಬಂಧಕಗಳು ಇವೆ. ಆ ಮನೆಯಲ್ಲಿ ಹೇಳಿದ ಮಾತನ್ನು ಈ ಮನೆಯಲ್ಲಿ ಗಣನೆಗೆ ತೆಗೆದುಕೊಳ್ಳುವುದು ಕಷ್ಟವಾಗಬಹುದು. ಅದರ ಬಗ್ಗೆ ಚರ್ಚೆ ಬರುವುದಕ್ಕೆ ಸಾಧ್ಯತೆಯಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಮೇಲ್ಮನೆಯಲ್ಲಿ ನಡೆಯತಕ್ಕ ಚರ್ಚೆಯು ಕಾರ್ಯಕಲಾಪದ ಸಂದರ್ಭದಲ್ಲಿ ಅಂದರೆ ಈ ಮನೆಯ ಸದಸ್ಯರ ಬಗ್ಗೆ ಚರ್ಚೆ ನಡೆಯತಕ್ಕ ಸಂದರ್ಭದಲ್ಲಿ, ವಿರೋಧಪಕ್ಷದವರು ಪೋಲೀಸ್ ಇಲಾಖೆಯನ್ನು ನೀವು ನಿಮ್ಮ ರಾಜಕೀಯಕ್ಕೆ ದುರುಪಯೋಗಪಡಿಸಿಕೊಂಡಿದ್ದೀರಿ ಎನ್ನತಕ್ಕ ಮಾತನ್ನು ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ಚರ್ಚೆ ಯಾವುದೇ ಮಟ್ಟಕ್ಕೆ ಹೋಗಿರಲಿ, ರಾಜ್ಯದ ಮುಖ್ಯಮಂತ್ರಿಗಳಾಗಿ ಉತ್ತರ ಹೇಳತಕ್ಕ ಕಾಲದಲ್ಲಿ ಮುಖ್ಯಮಂತ್ರಿಗಳು ಕೆಲವು ಮಾತುಗಳನ್ನು ಹೇಳಿದ್ದಾರೆ. ಇದು ನಮ್ಮ ಮುಂದೆ ಇರತಕ್ಕ ಪ್ರಶ್ನೆ. ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಹೇಳಿರತಕ್ಕ ಮಾತು ಏನೆಂದರೆ, 'ತೋರಿಸಲೇನು ಪೋಲೀಸ್ ರಾಜ್ಯದ ರುಚಿಯನ್ನು' ಎಂದು ಹೇಳಿದ್ದಾರೆ.